# ತುಮಕೂರು ವಿಶ್ವವಿದ್ಯಾನಿಲಯ

ಸಂಖ್ಯೆ:ತು.ವಿ:ಅ.ವಿ:ಅ.ಉ.ನೇ:2026-27/1251 ದಿನಾಂಕ:07.07.2026

## : ಅಧಿಸೂಚನೆ :

ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2026-27 ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ತರಗತಿಗಳಿಗೆ ವಿಷಯವಾರು ಬೋಧನೆ ಮಾಡಲು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂಬಂಧ ಯು.ಜಿ.ಸಿ. ನಿಯಮಾನುಸಾರ ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ. 55 ಅಂಕಗಳು (ಸಾಮಾನ್ಯ ಮತ್ತು ಇತರೆ ವರ್ಗದ ಅಭ್ಯರ್ಥಿಗಳು) ಹಾಗೂ ಶೇ. 50 ಅಂಕಗಳೊಂದಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು) **NET/SLET/SET/Ph.D ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ** ಆನ್‌ಲೈನ್ ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಸ್ನಾತಕೋತ್ತರ ಪದವಿಯ ವಿಷಯಗಳು : ಸಮೂಹ ಸಂವಹನ & ಪತ್ರಿಕೋದ್ಯಮ, ಸಮಾಜಕಾರ್ಯ, ಸಮಾಜಶಾಸ್ತ್ರ, ಸಾರ್ವಜನಿಕ ಆಡಳಿತ, ವಾಣಿಜ್ಯಶಾಸ್ತ್ರ & ವಾಣಿಜ್ಯಶಾಸ್ತ್ರ(ಫಿನ್ ಟೆಕ್ & ಇನ್‌ಷ್ಯೂರೆನ್ಸ್), ವಾಣಿಜ್ಯಶಾಸ್ತ್ರ(ತಿಪಟೂರು), ವಾಣಿಜ್ಯಶಾಸ್ತ್ರ(ಮಾಹಿತಿ ವ್ಯವಸ್ಥೆ), ದೈಹಿಕ ಶಿಕ್ಷಣ, ಪ್ರಾಣಿಶಾಸ್ತ್ರ, ಆಹಾರ ವಿಜ್ಞಾನ & ಪೋಷಣೆ, ಸಾವಯವ ರಸಾಯನಶಾಸ್ತ್ರ, ಮನೋವಿಜ್ಞಾನ, ರಸಾಯನಶಾಸ್ತ್ರ, ಭೌತಶಾಸ್ತ್ರ, ಸೂಕ್ಷ್ಮಜೀವಶಾಸ್ತ್ರ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ಗಣಕ ವಿಜ್ಞಾನ (M.Sc. in Computer Science & M.Sc. in Data Science), ಗಣಿತಶಾಸ್ತ್ರ, ಗಣಿತಶಾಸ್ತ್ರ(ಸಿರಾ), ಜೀವರಸಾಯನಶಾಸ್ತ್ರ, ಜೀವಾವರಣಶಾಸ್ತ್ರ & ಪರಿಸರ ವಿಜ್ಞಾನ ಹಾಗೂ ರಾಜ್ಯಶಾಸ್ತ್ರ.**

ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.tumkuruniversity.ac.in ರಿಂದ ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ಅಭ್ಯರ್ಥಿಗಳು ಆನ್‌ಲೈನ್ ಮುಖೇನ **ದಿನಾಂಕ:18.07.2026 ರ ಸಂಜೆ 05.30** ಗಂಟೆಯೊಳಗಾಗಿ ಅರ್ಜಿಗಳನ್ನು ಸಲ್ಲಿಸುವುದು.

ಆದೇಶದ ಮೇರೆಗೆ

08.07.2026

ಉಪಕುಲಸಚಿವರು

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

# ತುಮಕೂರು ವಿಶ್ವವಿದ್ಯಾನಿಲಯ

ಸಂಖ್ಯೆ:ತುವಿ:ಅವಿ:ಅಉನೇ:2026-27/1252 ದಿನಾಂಕ:07.07.2026

## : ಅಧಿಸೂಚನೆ :

ತುಮಕೂರು ವಿಶ್ವವಿದ್ಯಾನಿಲಯದಲ್ಲಿ 2026-27 ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪದವಿ ತರಗತಿಗಳಿಗೆ ವಿಷಯವಾರು ಬೋಧನೆ ಮಾಡಲು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವ ಸಂಬಂಧ ಯು.ಜಿ.ಸಿ. ನಿಯಮಾನುಸಾರ ಸಂಬಂಧಿಸಿದ ವಿಷಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ. 55 ಅಂಕಗಳು (ಸಾಮಾನ್ಯ ಮತ್ತು ಇತರೆ ವರ್ಗದ ಅಭ್ಯರ್ಥಿಗಳು) ಹಾಗೂ ಶೇ. 50 ಅಂಕಗಳೊಂದಿಗೆ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು) **NET/SLET/SET/Ph.D ವಿದ್ಯಾರ್ಹತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ** ಆನ್‌ಲೈನ್ ಮುಖೇನ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಸ್ನಾತಕೋತ್ತರ ವಿಭಾಗಗಳಲ್ಲಿ ಖಾಲಿ ಇರುವ ಅತಿಥಿ ಉಪನ್ಯಾಸಕರ ಹುದ್ದೆಗಳ ವಿವರ**

| ಕ್ರ ಸಂ. | ವಿಭಾಗ | ಹುದ್ದೆಗಳ ಸಂಖ್ಯೆ |
|---|---|---|
| 1 | ಸಮೂಹ ಸಂವಹನ & ಪತ್ರಿಕೋದ್ಯಮ | 04 |
| 2 | ಸಮಾಜಕಾರ್ಯ | 10 |
| 3 | ಸಮಾಜಶಾಸ್ತ್ರ | 01 |
| 4 | ಸಾರ್ವಜನಿಕ ಆಡಳಿತ | 03 |
| 5 | ವಾಣಿಜ್ಯಶಾಸ್ತ್ರ & ವಾಣಿಜ್ಯಶಾಸ್ತ್ರ (ಫಿನ್ ಟೆಕ್ & ಇನ್‌ಷ್ಯೂರೆನ್ಸ್) | 04 |
| 6 | ವಾಣಿಜ್ಯಶಾಸ್ತ್ರ(ತಿಪಟೂರು) | 05 |
| 7 | ವಾಣಿಜ್ಯಶಾಸ್ತ್ರ(ಮಾಹಿತಿ ವ್ಯವಸ್ಥೆ) | 04 |
| 8 | ದೈಹಿಕ ಶಿಕ್ಷಣ | 01 |
| 9 | ಪ್ರಾಣಿಶಾಸ್ತ್ರ | 06 |
| 10 | ಆಹಾರ ವಿಜ್ಞಾನ & ಪೋಷಣೆ | 05 |
| 11 | ಸಾವಯವ ರಸಾಯನಶಾಸ್ತ್ರ | 08 |
| 12 | ಮನೋವಿಜ್ಞಾನ | 04 |
| 13 | ರಸಾಯನಶಾಸ್ತ್ರ | 02 |
| 14 | ಭೌತಶಾಸ್ತ್ರ | 08 |
| 15 | ಸೂಕ್ಷ್ಮಜೀವಶಾಸ್ತ್ರ | 07 |
| 16 | ಜೈವಿಕ ತಂತ್ರಜ್ಞಾನ | 07 |
| 17 | ಸಸ್ಯಶಾಸ್ತ್ರ | 03 |
| 18 | ಗಣಕ ವಿಜ್ಞಾನ (M.Sc. in Computer Science & M.Sc. in Data Science) | 08 |
| 19 | ಗಣಿತಶಾಸ್ತ್ರ | 01 |
| 20 | ಗಣಿತಶಾಸ್ತ್ರ(ಸಿರಾ) | 02 |
| 21 | ಜೀವರಸಾಯನಶಾಸ್ತ್ರ | 02 |
| 22 | ಜೀವಾವರಣಶಾಸ್ತ್ರ & ಪರಿಸರ ವಿಜ್ಞಾನ | 05 |
| 23 | ರಾಜ್ಯಶಾಸ್ತ್ರ | 02 |

**ಸೂಚನೆ :**

1. ಕೋಷ್ಟಕದಲ್ಲಿ ಪ್ರಕಟಿಸಲಾದ ಖಾಲಿ ಹುದ್ದೆಗಳು ವಿಭಾಗಗಳ ಕಾರ್ಯಭಾರಕ್ಕನುಗುಣವಾಗಿ ಕಾಲಕಾಲಕ್ಕೆ ಪರಿಷ್ಕರಣೆಗೆ ಒಳಪಟ್ಟಿರುತ್ತವೆ.
2. ಅತಿಥಿ ಉಪನ್ಯಾಸಕರ ಸೇವೆಯನ್ನು ಯಾವುದೇ ಕಾರಣಕ್ಕೂ ಹಂಗಾಮಿ ಸಂಚಿತ ವೇತನ/ಹೊರಗುತ್ತಿಗೆ ನೇಮಕಾತಿಯೆಂದು ಪರಿಗಣಿಸಲಾಗುವುದಿಲ್ಲ. ಇದು ಶುದ್ಧಾಂಗ (Purely) ಅತಿಥಿ ಉಪನ್ಯಾಸದ ಸೇವೆಯಾಗಿರುತ್ತದೆ.
3. ಅರ್ಹ ಅಭ್ಯರ್ಥಿಗಳನ್ನು 1:3 ಅನುಪಾತದಡಿ ಸಂದರ್ಶನಕ್ಕೆ ಆಹ್ವಾನಿಸಿ, ನಿಯಮಾನುಸಾರ ಸಂದರ್ಶನ ನಡೆಸಲಾಗುವುದು.
4. ಸಂದರ್ಶನಕ್ಕೆ ಹಾಜರಾಗುವ ಅರ್ಹ ಅಭ್ಯರ್ಥಿಗಳು ತಮ್ಮ ವಿಷಯಗಳಲ್ಲಿ ಕನಿಷ್ಠ 30 ನಿಮಿಷಗಳ ಡೆಮೋ (ಪ್ರಾತ್ಯಕ್ಷಿಕೆ ಪಾಠ) ನೀಡಲು ಸಿದ್ಧರಿರತಕ್ಕದ್ದು.
5. ಅಭ್ಯರ್ಥಿಗಳು ನಿಯಮಾನುಸಾರ ತಮ್ಮ ಮೀಸಲಾತಿ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.
6. ಅಭ್ಯರ್ಥಿಗಳು ಸರ್ಕಾರಿ/ವಿಶ್ವವಿದ್ಯಾನಿಲಯ/ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಲ್ಲಿಸಿದ ಸೇವಾವಧಿಯನ್ನು ವಿಶ್ವವಿದ್ಯಾನಿಲಯದ ನಿಯಮಾನುಸಾರ ಮಾತ್ರ ಪರಿಗಣಿಸಲಾಗುವುದು.
7. ಸಂಶೋಧನಾ ಲೇಖನಗಳು/ಪ್ರಕಟಣೆಗಳನ್ನು ಯು.ಜಿ.ಸಿ. ಯಿಂದ ಮಾನ್ಯತೆ ಹೊಂದಿದ (UGC Carelisted Review) ನಿಯತಕಾಲಿಕೆಗಳಲ್ಲಿ ಪ್ರಕಟಸಿದ್ದಲ್ಲಿ ಮಾತ್ರ ಪರಿಗಣಿಸಲಾಗುವುದು.
8. **ಅರ್ಜಿ ಶುಲ್ಕದ ವಿವರ :** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚು ವಿಷಯಗಳಿಗೆ ಅರ್ಜಿ ಸಲ್ಲಿಸುವುದಾದಲ್ಲಿ ಪ್ರತಿ ವಿಷಯಕ್ಕೆ ಪ್ರತ್ಯೇಕ ಶುಲ್ಕವನ್ನು ಪಾವತಿಸಿ, ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಒಂದೇ ಶುಲ್ಕವನ್ನು ಪಾವತಿಸಿದಲ್ಲಿ ಮೂಲ ಪಾವತಿ ಮಾಡಿದ ವಿಭಾಗದ ಅರ್ಜಿ ಎಂದು ಮಾತ್ರ ಪರಿಗಣಿಸಲಾಗುವುದು. ಯಾವುದೇ ಕಾರಣಕ್ಕೂ ಶುಲ್ಕ ಮರುಪಾವತಿಗೆ ಅವಕಾಶವಿರುವುದಿಲ್ಲ.

   **ಅಭ್ಯರ್ಥಿಗಳು ಶುಲ್ಕವನ್ನು SBI Collect – Payment Category - Guest Faculty Application Fee ರಲ್ಲಿ ಪಾವತಿಸುವುದು.**

| ಸಾಮಾನ್ಯ ವರ್ಗ | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 | ವಿಕಲಚೇತನ ಅಭ್ಯರ್ಥಿಗಳು |
|---|---|---|
| ರೂ. 500-00/- | ರೂ. 250-00/- | ಯಾವುದೇ ಶುಲ್ಕ ಇರುವುದಿಲ್ಲ. |
| (Non-Refundable Amount) | | |

9. ಅಭ್ಯರ್ಥಿಗಳು ಆನ್‌ಲೈನ್ ಮುಖೇನ <u>ದಿನಾಂಕ:18.07.2026 ರ ಸಂಜೆ 05.30 ಗಂಟೆಯೊಳಗಾಗಿ</u> ಅರ್ಜಿಗಳನ್ನು ಸಲ್ಲಿಸುವುದು.
10. ಅರ್ಹ ಅಭ್ಯರ್ಥಿಗಳು ತಮ್ಮ ಸ್ವಂತ ವೆಚ್ಚದಿಂದ ಸಂದರ್ಶನಕ್ಕೆ ಹಾಜರಾಗತಕ್ಕದ್ದು.
11. **ಸಂದರ್ಶನದ ದಿನಾಂಕ ಮತ್ತು ಸಮಯದ ಕುರಿತಂತೆ ಅಭ್ಯರ್ಥಿಗಳ ಅಧಿಕೃತ ಇ–ಮೇಲ್‌ಗೆ ಮಾತ್ರ ಸಂದೇಶವನ್ನು ರವಾನಿಸಲಾಗುವುದು.**
12. ಆಯ್ಕೆಗೊಂಡ ಅತಿಥಿ ಉಪನ್ಯಾಸಕರು ಕರ್ತವ್ಯ ಲೋಪ/ಅಶಿಸ್ತು ಪ್ರದರ್ಶಿಸಿದಲ್ಲಿ ಅಥವಾ ಪ್ರತ್ಯಕ್ಷ/ಪರೋಕ್ಷವಾಗಿ ಇನ್ನಾವುದೇ ರೀತಿಯ ಒತ್ತಡ ತಂದಲ್ಲಿ ಅಂತಹವರನ್ನು ತಕ್ಷಣವೇ ಸೇವೆಯಿಂದ ಬಿಡುಗಡೆಗೊಳಿಸಲಾಗುವುದು.

ಆದೇಶದ ಮೇರೆಗೆ

08-07-2026

ಉಪಕುಲಸಚಿವರು

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು